**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 06 ನೇ ಜುಲೈ ತಿಂಗಳು 2026ರಂದು

**ಸಿಸಿ ನಂ.187/2026**

**ಫಿರ್ಯಾದುದಾರರುಃ** ಸರಕಾರ (ಹುಣಸೂರು ಪಟ್ಟಣ ಪೊಲೀಸರಿಂದ)

– ವಿರುದ್ಧ –

**ಆರೋಪಿಃ** ತೇಜಸ್., ಬಿನ್ ನಾಗರಾಜು, 24 ವರ್ಷ,
ವಾಸಃ ಯಶೋಧರಪುರ ನಗರ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 17.01.2026ರಂದು ಮಧ್ಯಾಹ್ನ 12.45 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು ಹುಣಸೂರು ಸರ್ಕಲ್ ಬಳಿ ಆರೋಪಿಯಾದ ನೀವು ನಿಮ್ಮ ಕೆಎ–45/ಇಎಫ್–1445 ರ ಹೀರೋ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ನಲ್ಲಿ ಚಾಸಾ.2 ಸುಕನ್ಯ ರವರನ್ನು ಕೂರಿಸಿಕೊಂಡು ಜಯಪುರದ ಸೋಲಿಗರ ಕಾಲೋನಿಯಿಂದ ಯಶೋಧರಪುರ ಗ್ರಾಮಕ್ಕೆ ಬರಲು ನಿಮ್ಮ ಮೋಟಾರ್ ಬೈಕ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ನಿಮ್ಮ ಬೈಕಿನ ಮುಂದೆ ಹೋಗುತ್ತಿದ್ದ ಕಾರಿಗೆ ಸಡನ್ ಹಾಕಿ ಹಸು ಬಂದಾಗ ಅದರ ಕಾರಿನ ಚಾಲಕ ಸಡನ್ ಆಗಿ ಕಾರಿಗೆ ಬ್ರೇಕ್ ಹಾಕಿದಾಗ ಕಾರಿನ ಹಿಂದೆ ಹೋಗುತ್ತಿದ್ದ ನಿಮ್ಮ ಬೈಕ್ ನ್ನು ಸಹ ನೀವು ಸಡನ್ ಆಗಿ ಬ್ರೇಕ್ ಹಾಕಿದಾಗ ನೀವು ಮತ್ತು ಚಾಸಾ.2ರವರು ಕೆಳಕ್ಕೆ ಬಿದ್ದಾಗ

ಚಾಸಾ.2ರವರ ಬಲ ಕಾಲಿನ ಮಂಡಿಯ ಕೆಳ ಭಾಗದ ಮೂಳೆ ಮತ್ತು ಬಲ ಕಾಲಿನ ಹಿಮ್ಮಡಿಯ ಬಳಿ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂ., ಹುಣಸೂರು.**

ANITHA Digitally signed by ANITHA Date: 2026.07.06 17:50:41 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು.**

**ಸಿಸಿ ನಂ.187/2026**

ಆಪಾದಿತನ ಹೆಸರು : ತೇಜಸ್.,
ತಂದೆಯ ಹೆಸರು : ನಾಗರಾಜು,
ವಯಸ್ಸು : 24 ವರ್ಷ,
ಉದ್ಯೋಗ : ಯಶೋಧರಪುರ ನಗರ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 234ರ ಅಡಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1 : | ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ 2 : | ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ |

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ 06.07.2026 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ANITHA Digitally signed by ANITHA Date: 2026.07.06 17:50:47 +0530

Sd/-
(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**